ವಾಸುದೇವಪ್ಪನೋರು 'ನಮ್ಮ ದೇವರನ್ನ ಈ ಮಾದಿಗ ಮುಂಡೆ ಮಗ ಹೇಸಿಗೆ ಕೋಟೆಯನ್ನು ನುಂಗಿದ ಅಂತಾನಲ್ಲ' ಎಂದು ಮನದೊಳಗೆ ಹಳಿದು, ಹಲ್ಲು-ಹಲ್ಲು ಮಸೆದರು. ವಾಸುದೇವಪ್ಪನೋರ ಜೊತೆಯಾಗೇ ಬರ್ತಿದ್ದ ಕಲ್ಲೇಶ್ವರ ದೇವಾಲಯದ ಅರ್ಚಕರು ಪಳ್ಳನೆ ನಕ್ಕು 'ನೋಡ್ರೀ ನಮ್ಮ ದೇವ್ರನ್ನ ಸ್ಮಶಾನ ವಾಸಿ ಅಂತಿದ್ರಿ, ಈ ಮಾದಿಗ ಮುಂಡೇ ಮಕ್ಳ ಬಾಯಲ್ಲಿ ನಿಮ್ಮ ದೇವ್ರ ಪವಾಡವ ಕೇಳಿ ಮಡಿ ಮಾಡ್ಕಳಂಗಾಯ್ತು' ಎಂದು ಬಲು ಆಡಿಕೊಂಡು ನಕ್ಕರು. ಕಲ್ಲೇಶ್ವರ ದೇವಾಲದ ಅರ್ಚಕರಿಗೆ ಆದಾಯ ಬರುವ ದೇವಾಲಯವ ಹಿಡ್ಕಂಡಿದ್ದ ವಾಸುದೇವಪ್ಪನೋರ ಮೇಲೆ ಒಂಥರಾ ಅಸೂಯೆ ಇತ್ತು. ಅವರನ್ನ ಎಂಗರಾ ಮಾಡಿ ಯಾವುದರಲ್ಲಾದರೂ ಸಿಗಾಕಿಸಿ ಒಂಚೂರು ದುಡ್ಡು ಖರ್ಚು ಮಾಡಿಸ್ಲೇಬೇಕು ಅಂತ ಅವಕಾಶಕ್ಕೆ ಕಾಯ್ತಾ ಇರೋದು, ಅಲ್ಲಿ-ಇಲ್ಲಿ ಟೀಕೆ ಮಾಡೋದು ವಾಸುದೇವಪ್ಪನೋರ ಗಮನಕ್ಕೂ ಬಂದಿತ್ತು. ಆ ಕಾರಣಕ್ಕಾಗೇ ಶಂಕರ ಶಾಸ್ತ್ರಿಗಳ ಜೊತೆ ಬಲು ಜಾಗರೂಕವಾಗೇ ನಡಕಂತಿದ್ರು. ಅಂಗಿದ್ದೂ ನಾನೇನು ಮಾಡದೇ ಈ ಮಾದಿಗರಿಂದ ನಂಗೆ ಅವಮಾನ ಆಯ್ತಲ್ಲ ಅಂತ ಬಲು ಬೇಜರ್ಮಾಡ್ಕಂಡ ವಾಸುದೇವಪ್ಪನೋರಿಗೆ ಆ ಕ್ಷಣಕ್ಕೆ ಈ ದಾಸಪ್ಪನ ತಲೆಗೆ ಬವನಾಸಿ ದಬ್ಬಾಕಿ ಅದರ ಮೇಲೆ ಟಣ್ ಅನ್ನಂಗೆ ಜಾಗಟೇಲೆ ಬಡೀಬೇಕು. ಅವನ ಕೈಯಾಗಿನ ಬಾನಕಿ ತಕ್ಕಂಡು ಬೆನ್ನು ಮೂಳೆ ಮುರಾಕಬೇಕು ಅನ್ನಿಸಿತಾದರೂ ಅದುನ್ನೆಲ್ಲಾ ಒಳಗೆ ಅದುಮಿಕೊಂಡು ಸಪ್ಪಗೆ ಸುಮ್ಮನಾದರೂ.

ತಮ್ಮ ಪೂಜಾರಿಕೇಲಿ ಇರೋ ಈ ದೇವರ ಹೆಸರನ್ನ ಊರ ಮಧ್ಯದಲ್ಲಿ ಹರಾಜು ಹಾಕ್ತಿರೋ ನಾಮದ ಒಕ್ಕಲಿನ ಮಾದಿಗರ ದಾಸಪ್ಪನನ್ನೇ ನೋಡುತ್ತಿದ್ದ ವಾಸುದೇವಪ್ಪನೋರ ಸಾಕ್ಷಿಯಾಗಿಯೇ ಮಣೇವು ಶುರುವಾಯಿತು. ಮಣೇವು ಆಡ್ಕಂಡು ಆ..ಹಾ.. ಆಹಾ.. ಹಾ.. ಅಂತ ಬಾಯಿ ತೆಗೆದುಕೊಂಡು ಬಂದ ಕೆಂಪು ಅರಿಗೆಯ ಆರ್ಭಟಕ್ಕೆ ಎದರಿದ ಮಾದಿಗರ ಹುಡುಗನೊಬ್ಬ ದಿಕ್ಕಾಪಾಲಗಿ ಓಡುತ್ತಾ ಮಡಿ ಬಟ್ಟೇಲಿ ಸಂಜೆ ಪೂಜೆಗೆಂದು ಬರುತ್ತಿದ್ದ ವಾಸುದೇವಪ್ಪನೋರ ತೊಡೆ ಹಿಡಿದು ನಿಂತು ಬಿಟ್ಟ. ಇದಾಗಿದ್ದೇ ತಡ ಆವೇಶದಲ್ಲಿ ಬುಸುಗುಡುತ್ತಿದ್ದ ಎರಡೂ ಹರಿಗೆಗಳ ಆವೇಶವು ಉಕ್ಕುವುದರ ಮೇಲೆ ನೀರು ಬಿಟ್ಟಂಗೆ ಇಳಿದು ಹೋಯಿತು.

ತಮ್ಮ ಪಾಡಿಗೆ ತಾವು ಮಡಿಯಲ್ಲಿ ಪೂಜೆಗೆಂದು ಬಂದಿದ್ದ ಅಯ್ಯನೋರ ತೊಡೆ ತಬ್ಬಿ ಮೈಲಿಗೆ ಮಾಡಿ, ಹದಗೆಡಿಸಿದ ಚಿಕ್ಕಕೆಂಪನ ಮಗನ ತಪ್ಪಿಗೆ 101ರೂಪಾಯಿಯನ್ನು ಒಂದೇ ವಾರದೊಳಗೆ ಶ್ರೀನಿವಾಸನ ದೇವಾಲಯದ ಶ್ರೀನಿವಾಸ ದೇವಾಲಯದ ದುಬ್ಬಿಗಡಿಗೆಗೆ ತಪ್ಪಿನ ಕಾಣಿಕೆಯಾಗಿ ಹಾಕಬೇಕೆಂದು ನಿಂತಲ್ಲೇ ನ್ಯಾಯತೀರ್ಮಾನವಾಯಿತು. ಉಟ್ಟರೋ ಬಟ್ಟೆನೆಲ್ಲಾ ಕೊಡವೀರೂ ಎಡ್ಡೂ ರೂಪಾಯಿಯೂ ಇಲ್ಲದ ಚಿಕ್ಕಕೆಂಪನು ಒಂದು ವಾರದೊಳಗೆ ಕೊಡಬೇಕಾದ ನೂರೊಂದು ರೂಪಾಯಿಗಳ ಬದಲು ನೂರೊಂದು ಎಲೆ ಮೇಲೆ ಇಟ್ಟದ್ದ ಹಲಸಿನ ಹಣ್ಣಿನ ರಸಾಯನವನ್ನು ಹಸಿದ ಕಣ್ಣುಗಳಿಂದ ನೋಡುತ್ತಾ ಉಗುಳು ನುಂಗಿಕೊಂಡ.

* * *

ಎರಡು-ಮೂರು ದಿನ ಇಂಗೇ ಕಳೆದೋಯ್ತು ಚಿಕ್ಕೆಂಪ ತನ್ನ ಐಟಂಗಳಾದ ಗ್ವಾರೆ, ಕಸಬರಿಗೆ, ಗುದ್ದಲಿಯಿಂದ ಮೂರು ದಿನಕ್ಕೆ 20ರೂಪಾಯಿ ಗಳಿಸಿ ದಂಡಕಟ್ಟಲು ಅಂತ 5 ರೂಪಾಯಿ ಉಳಿಸಿಕೊಂಡ. ಯಾರಾದರೂ ಸತ್ತಿದ್ದರೆ ಗುಂಡಿಕಾಸು ಅಂತ 50 ರೂಪಾಯಿ ಒಂದು ಪ್ಯಾಕೆಟ್ಟು ಎಣ್ಣೆ ಬರೋದಲ್ಲ... ಇಂಥಾ ಕಾಲದಲ್ಲಿ ನಮ್ಮ ಕುಲದೈವಿ ಜಲ್ದಗೆರೆ ಅಮ್ಮ ನನ್ನ ಕೈ ಬಿಟ್ಟಳ್ಳಲ್ಲ... ಎಂದು ಹಟ್ಟಿ ತುಂಬ ಸಾಯೊಂಗಾಗಿದ್ದ ಎಲ್ಲಾ ಜೀವಗಳನ್ನ ಮಾತಾಡಿಸ್ಕಂಡು ಬಂದ. ಊರು ಹೋಗು ಅಂದು- ಮಸಾಣ ಬಾ ಅಂದ್ರೂ ಎತ್ತಲೂ ಕದಲದಂಗೆ ಕುಂತಿದ್ದ ಆ ಜೀವಗಳಾವುವೂ ಇವನ ಕಷ್ಟಕಾಲದಲ್ಲಿ ಸಾಯಂಗೆ ಕಾಣಬರಲಿಲ್ಲ. ಇಂಥಾ ನಿರಾಸೆಯ ಮೂಡಲ್ಲಿದ್ದ ಚಿಕ್ಕೆಂಪನು ತನ್ನ ಪ್ರಾಣ ಸ್ನೇಹಿತ ಉಂತೂರನ ಗುಡಿಸಲ ಬಳಿ ಹೋಗಿ ಬಿಕ್ಕಳಿಸ್ಕಂಡು ಅತ್ತ. ಮಾದಿಗರ ಕೇರಿ ಜನರಲ್ಲೆಲ್ಲಾ ಬರೀ ಮೂರುವರೆ ಅಡಿ ಇದ್ದರೂ ಅಪ್ರತಿಮ ಐಡಿಯಾಗಾರನಾಗಿದ್ದ ಉಂತೂರ 'ಬುಡ್ಲ ನಿಂನ್ ದುಡ್ಡು ನಾನೇ ವಂಚಿ ಕೊಡ್ತೀನಿ' ಎಂದು ಭೀಷ್ಮನಿಗಿಂತ ಒಂದು ಕೈ ಮೇಲೆಂಬಂತೆ ಪ್ರಮಾಣ ಗೈದ. ಅತ್ತ ವತ್ತಾರೆನೆ ಬೆಳ್ಳಿಮೂಡೋ ಟೈಮಲ್ಲಿ ಶೆಟ್ಟಳ್ಳಯನ ಮ್ಯಾಕೆ ದೊಡ್ಡಿಗೋಗಿ ಅಂತೆಂತದೋ ಮಂತ್ರದಾಗಿ ಎತ್ತಿ ತಂದೋನಂಗೆ ಬಂದು ಹೋತನ್ನ ಎಗಲಮ್ಯಾಲಿಕ್ಕಂಡು